# WATCH
# ಎಲ್ಲರ ಪಾಲಿನ 'ಪಂಚಾಕ್ಷರಿ'



**ಕಾಲವೇ ದೇವರು ಎಂದು ಹೇಳುವವರೂ, 'WATCH' ಎಂಬ ಪಂಚಾಕ್ಷರಿ ಮಂತ್ರವನ್ನು ಅರಿತಿರುವುದು ಕಡಿಮೆ. ಏನಿದು ವಾಚ್ ಮಂತ್ರ? ಇದು ನಮ್ಮ ಬದುಕಿನ ಚೆಲುವನ್ನು ಹೆಚ್ಚಿಸುವ ಹಾಗೂ ಸಮಾಜದ ಆರೋಗ್ಯಕ್ಕೂ ಅಗತ್ಯವಾದ 'ಪಂಚಾಕ್ಷರಿ'.**

**■ ಟಿ. ಕೃಷ್ಣಮೂರ್ತಿ**

ವಾಚು ಅಥವಾ ಕೈಗಡಿಯಾರ ಯಾರ ಕೈಯಲ್ಲಿಲ್ಲ ಹೇಳಿ? ಈ ಗಡಿಯಾರ ಈಗ ಮೊಬೈಲ್‌ಗಳ ರೂಪದಲ್ಲೂ ನಮ್ಮ ಕೈಗಳಲ್ಲಿದೆ. ದಿನದ ಸಮಯ ತಿಳಿಯಲು, ಸಮಯದ ಮೌಲ್ಯ ತಿಳಿಯಲು, ಮುಂದಿನ ಕಾರ್ಯಗಳನ್ನು ಯೋಜಿಸಲು ಗಡಿಯಾರವನ್ನು ಉಪಯೋಗಿಸುತ್ತೇವೆ. ಸಮಯ ತಿಳಿಯಲು ಮಾತ್ರವಲ್ಲ – ಗಡಿಯಾರದಿಂದ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಮಾನವೀಯ ಮೌಲ್ಯಗಳನ್ನು, ತತ್ವಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ ಎಂದರೆ ಆಶ್ಚರ್ಯವಾದೀತು ಅಲ್ಲವೇ? ಈ ಬಗ್ಗೆ ಬಹಳ ಕಾಲದ ಹಿಂದೆ 'ರತ್ನನ ಪದಗಳು' ಖ್ಯಾತಿಯ ಜಿ.ಪಿ. ರಾಜರತ್ನಂ ಅವರು ಗಮನಸೆಳೆದಿದ್ದರು. 'ವಾಚ್'; ಹಳೆಯದಾಗಬಹುದು; ಪೂರ್ವಸೂರಿಗಳ ವಾಕ್ಕು ಎಂದಿಗೂ ಪ್ರಸ್ತುತ. ಹಾಗಾಗಿ, ರಾಜರತ್ನಂ ಅವರ 'ವಾಚ್' ಸಿದ್ಧಾಂತವನ್ನು ಈಗಲೂ ನಾವು ಮುಂದುವರಿಸಬಹುದು.

ಕನ್ನಡದ ಗಡಿಯಾರ ಇಂಗ್ಲಿಷ್‌ನಲ್ಲಿ 'ವಾಚ್' (WATCH). 'ವಾಚ್' ಎಂಬ ಶಬ್ದಕ್ಕೆ ಎರಡು ಬಗೆಯ ಅರ್ಥ ನೀಡಬಹುದು. ಈ ಶಬ್ದವನ್ನು ನಾಮಪದವಾಗಿ ಬಳಸಿದರೆ ಸಮಯ ತಿಳಿಯಲು ಉಪಯೋಗಿಸುವ ಸಾಧನ ಎನ್ನಬಹುದು. ಇದನ್ನೇ ಕ್ರಿಯಾಪದವಾಗಿ ಬಳಸಿದರೆ 'ಗಮನಿಸು', 'ಪರಿಶೀಲಿಸು', 'ನಿಗಾವಹಿಸು' ಎಂಬಿತ್ಯಾದಿಯಾಗಿ ವ್ಯಾಖ್ಯಾನಿಸಬಹುದು.

ವಾಚ್/WATCH ಎಂಬುದನ್ನು 'ಆಕ್ರೋನಿಮ್' ಅಥವಾ 'ಪದಪುಂಜ' ಎನ್ನಬಹುದು. ಇದನ್ನು ಒಂದು ಶಬ್ದದ/ಪದದ ಹಲವಾರು ಅಕ್ಷರಗಳನ್ನು ಸೇರಿಸಿ ಮಾಡಿದ ಹೊಸ ಪದಗಳ ಸರಣಿ ಅಥವಾ ಗುಚ್ಛ ಎಂತಲೂ ಕರೆಯಬಹುದು. ವಾಚನ್ನು ನೋಡಿ ಇದರಲ್ಲಿರುವ ಪದಪುಂಜವನ್ನು ಬಳಸಿಕೊಂಡು ಮಾನವೀಯ ಮೌಲ್ಯದ ಅಥವಾ ಜೀವನದ ನಡೆಯ ಬಗ್ಗೆ ತಿಳಿಯಬಹುದು; ಬದುಕಿನಲ್ಲಿ ಅಗತ್ಯದ ಬದಲಾವಣೆಗಳನ್ನೂ ಮಾಡಿಕೊಳ್ಳಬಹುದು.

ವಾಚ್ ಶಬ್ದದ ಮೊದಲ ಅಕ್ಷರ 'W'. ಈ ಅಕ್ಷರ 'ವಾಚ್ ಯುವರ್ ವರ್ಡ್ಸ್' ಎನ್ನುವುದನ್ನು (watch your words) ಸಂಕೇತಿಸುತ್ತಿದೆಯೆ? ಅಂದರೆ, ನಮ್ಮ ಮಾತಿನಲ್ಲಿ ಬಳಸುವ ಶಬ್ದಗಳ ಬಗ್ಗೆ ಗಮನವಿರಲಿ, ಎಚ್ಚರವಿರಲಿ ಎಂದರ್ಥ. ಮಾತಿನಲ್ಲಿ ಬಳಸಿದ ಶಬ್ದವು ಇನ್ನೊಬ್ಬರಿಗೆ ಸಂತೋಷ ಅಥವಾ ದುಃಖವನ್ನು ತಂದೀತು; ಮುಜುಗರ ತಂದೀತು; ಕೇಡು ಮಾಡೀತು. ಮಾತ್ರವಲ್ಲದೆ ಈ ಮಾತು ಶತ್ರುಗಳನ್ನು ಹುಟ್ಟುಹಾಕೀತು; ಸ್ನೇಹವನ್ನೂ ಬೆಳೆಸೀತು. ಜಗಳ ಕದನಗಳಿಗೂ ಕಾರಣವಾದೀತು. ಹಾಗಾಗಿ ತುಸು ಯೋಚಿಸಿ ಮಾತನಾಡಿ ಎನ್ನಬಹುದು. ಅದಕ್ಕಾಗಿಯೇ ಪ್ರಾಜ್ಞರಾಡಿದ್ದು – 'ಯೋಚಿಸಿ ನುಡಿ; ನುಡಿದು ಯೋಚಿಸಬೇಡ' ಎಂದು.

ಇನ್ನು ವಾಚ್ ಶಬ್ದದ ಎರಡನೇ ಅಕ್ಷರ 'A'. ಈ ವರ್ಣದಿಂದ 'ಆಕ್ಷನ್' ಅಥವಾ 'ಆಕ್ಟಿವಿಟಿ' (Action, activity) ಎಂಬ ಶಬ್ದಗಳನ್ನು ಜೋಡಿಸಬಹುದು. ಅಂದರೆ ಕ್ರಿಯೆ, ಕಾರ್ಯ ಎಂಬ ಅರ್ಥವನ್ನು ನೀಡಬಹುದು. ನೀವು ಮಾಡುತ್ತಿರುವ ಕೃತ್ಯಗಳು/ಕ್ರಿಯೆಗಳು, ಚಟುವಟಿಕೆಗಳು ಸರಿಯಾಗಿವೆಯೇ? ಸ್ವೀಕಾರಾರ್ಹವೇ? ಯಾರಿಗೂ ಮುಜುಗರ ಉಂಟುಮಾಡುವುದಿಲ್ಲವಷ್ಟೇ? ಎಂಬುದನ್ನು ಪರಿಶೀಲಿಸಿ (ವಾಚ್ ಮಾಡಿ). ಸರಿ ಇದ್ದರೆ ಮುಂದುವರೆಯಿರಿ, ಸರಿಯಾಗಿಲ್ಲದಿದ್ದರೆ ಕೂಡಲೇ ಬದಲಾಯಿಸಿಕೊಳ್ಳಿ ಎಂಬ ಎಚ್ಚರಿಕೆಯನ್ನು ಈ ಶಬ್ದವು ನೀಡುತ್ತದೆ.

ವಾಚ್ ಶಬ್ದದ ಮೂರನೇ ಅಕ್ಷರ 'T'. 'ಟಿ' ಫಾರ್ 'ಥಾಟ್' (Thought). ಕನ್ನಡದಲ್ಲಿ ಯೋಚನೆ, ಚಿಂತನೆ ಎಂದು ಹೇಳಬಹುದು. ದೈನಂದಿನ ಕೆಲಸ ಕಾರ್ಯಗಳಲ್ಲಿರುವಾಗ ಬೇರೆ ಬೇರೆ ಆಲೋಚನೆಗಳು ಬರಬಹುದು. ಅವುಗಳಲ್ಲಿ ದುರಾಲೋಚನೆಯೂ ಇರಬಹುದು; ದೂರಾಲೋಚನೆಯೂ ಇರಬಹುದು. ಈ ಆಲೋಚನೆಗಳು, ಆಲೋಚಿಸುವ ವಿಧಾನಗಳು ಸರಿಯಾಗಿದೆಯೇ ಗಮನಿಸಿ ಎಂಬುದನ್ನು ಗಮನಿಸುವುದು ಅಗತ್ಯ.

ವಾಚ್ ಶಬ್ದದ 'T' ಅಕ್ಷರವನ್ನು 'ಟೈಂ' (Time) ಎಂದೂ ವ್ಯಾಖ್ಯಾನಿಸಬಹುದು. ನಮ್ಮ ಸಮಯದ ನಿರ್ವಹಣೆಯ ಕ್ರಮ ಸರಿಯಾಗಿದೆಯೇ? ಸರಿ ಇಲ್ಲದಿದ್ದರೆ ಸರಿಯಾಗಿ ನಿರ್ವಹಿಸಿ ಎಂಬ ಎಚ್ಚರಿಕೆಯ ಮಾತನ್ನು ಈ 'ಟೈಮ್' ನಮ್ಮ ಗಮನಕ್ಕೆ ತರುತ್ತದೆ. ಏಕೆಂದರೆ ಸಮಯವು ಯಾರಿಗೂ ಕಾಯುವುದಿಲ್ಲವಷ್ಟೇ. ಹಣ ಕಳೆದರೆ